KATK010041482024

# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.

## Spl.C. 488/2024

**ಫಿರ್ಯಾದುದಾರಃ** ರಾಜ್ಯ ಸರ್ಕಾರದ ಪರವಾಗಿ
ಹುಲಿಯೂರುದುರ್ಗ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರುಃ**

1) ಕಾಂತಕುಮಾರ.ಬಿ.ಕೆ. @ ಕುಮಾರ್,
ಬಿನ್ ದೊಡ್ಡಮರಿಯಪ್ಪ, 35 ವರ್ಷ,
ಬೂದನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

3) ಯೋಗೀಶ @ ಹುಚ್ಚೇಗೌಡ,
ಬಿನ್ ಶ್ರೀನಿವಾಸ್, 20 ವರ್ಷ,
ಹಳೇಊರು ಗ್ರಾಮ, ಹುಲಿಯೂರುದುರ್ಗ
ಹೋಬಳಿ, ಕುಣಿಗಲ್ ತಾಲ್ಲೂಕು.

4) ಚಿಕ್ಕಮಂಚಯ್ಯ @ ಮಾಲ,
ಬಿನ್ ಕೇಶವಯ್ಯ, 21 ವರ್ಷ,
ಬೂದನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

# ದೋಷಾರೋಪಣೆ

ನಾಗಿರೆಡ್ಡಿ.ಎ., 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ.

ದಿನಾಂಕ 26.05.2024 ರಂದು ಸಂಜೆ 7 ಗಂಟೆ ಸಮಯದಲ್ಲಿ ಲಕ್ಷ್ಮೀಪುರ ಗ್ರಾಮಕ್ಕೆ ಸೇರಿರುವ ಹುಲಿಯೂರುದುರ್ಗ - ಅಮೃತೂರು ಸಂಪರ್ಕ ಕಲ್ಪಿಸುವಂತಹ ಟಾರ್ ರಸ್ತೆಗೆ ಹೊಂದಿಕೊಂಡಂತೆ ಇರುವ ಲಕ್ಷ್ಮೀಪುರ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಗಿರಿಯಪ್ಪ ಬಿನ್ ರಾಜಣ್ಣರವರ ನೀಲಗಿರಿ ತೋಪಿನ ನೇರದಲ್ಲಿರುವ ಸಾರ್ವಜನಿಕ ಟಾರ್ ರಸ್ತೆಯ ಪಕ್ಕದಲ್ಲಿರುವ ಮಣ್ಣು ಮತ್ತು ಕಲ್ಲಿನಿಂದ ಕೂಡಿದ ಸ್ಥಳದಲ್ಲಿ 1, 3 ಮತ್ತು 4 ನೇ ಆರೋಪಿತರಾದ ನೀವುಗಳು ನಿಂತಿದ್ದಾಗ, ಪರಿಶಿಷ್ಟ ಬೋವಿ ಜನಾಂಗದ ಚಾಸಾ.2 ರವರು 1 ನೇ ಆರೋಪಿಯಾದ ನೀವು ಇರುವುದನ್ನು ನೋಡಿ ನಿಮ್ಮ ನಡುವೆ ಇದ್ದಂತಹ ಹಣಕಾಸಿನ ವಿವಾದದ ಹಿನ್ನೆಲೆಯಲ್ಲಿ ನಿಮ್ಮ ಹತ್ತಿರ ಬಂದು ಸಾಲವಾಗಿ ನೀಡಬೇಕಾದ ಹಣವನ್ನು ಕೊಡುವಂತೆ ಕೇಳಿದಾಗ, 1 ನೇ ಆರೋಪಿಯಾದ ನೀವು ಏಕಾಏಕಿ ಕೋಪಗೊಂಡು ನನ್ನ ಬಳಿಯೇ ಹಣ ಕೇಳುತ್ತೀಯಾ, ಬೋಳಿ ಮಗನೇ ಎಂದು ಅವಾಚ್ಯವಾಗಿ ಬೈದು ಅವಮಾನಮಾಡಿರುತ್ತೀರಿ. ಆದ್ದರಿಂದ 1, 3 ಮತ್ತು 4 ನೇ ಆರೋಪಿತರಾದ ನೀವು ಭಾ.ದಂ.ಸಂ.504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1, 3 ಮತ್ತು 4 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ 1 ನೇ

ಆರೋಪಿಯಾದ ನೀವು ಕಬ್ಬಿಣದ ರಾಡ್ ನಿಂದ ಚಾಸಾ.2 ರವರ ಎಡಗೈಗೆ ಹೊಡೆದು ಎಡಗೈನಲ್ಲಿರುವ ಬೆರಳುಗಳಿಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿರುತ್ತೀರಿ. ಅಲ್ಲದೇ, ರಿಪೀಸ್ ಪಟ್ಟಿಯಿಂದ ಚಾಸಾ.2 ರವರ ಬೆನ್ನಿನ ಹಿಂಭಾಗಕ್ಕೆ, ಸೊಂಟಕ್ಕೆ, ಮುಖಕ್ಕೆ, ಬಾಯಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತೀರಿ. ಆದ್ದರಿಂದ, ಆದ್ದರಿಂದ 1, 3 ಮತ್ತು 4 ನೇ ಆರೋಪಿಗಳಾದ ನೀವು ಭಾ.ದಂ.ಸಂ.324 ಸಹವಾಚಕ ಕಲಂ 34 ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ Sec.3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1, 3 ಮತ್ತು 4 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಕಬ್ಬಿಣದ ರಾಡ್ ನಿಂದ ಚಾಸಾ.2 ರವರ ಎಡಗೈಗೆ ಹೊಡೆದು ಎಡಗೈ ಕಿರುಬೆರಳಿನ ಮೂಳೆ ಮುರಿದು ತೀವ್ರ ಸ್ವರೂಪದ ಗಾಯವನ್ನುಂಟುಮಾಡಿರುತ್ತೀರಿ. ಆದ್ದರಿಂದ, ಆದ್ದರಿಂದ 1, 3 ಮತ್ತು 4 ನೇ ಆರೋಪಿಗಳಾದ ನೀವು ಭಾ.ದಂ.ಸಂ.326 ಸಹವಾಚಕ ಕಲಂ 34 ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ Sec.3(1)(c), 3(2)(v) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1, 3 ಮತ್ತು 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಿಕ್ಕಸಿಕ್ಕಲ್ಲಿ ಹಣ ಕೇಳಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ 1, 3 ಮತ್ತು 4 ನೇ ಆರೋಪಿಗಳಾದ ನೀವು ಭಾ.ದಂ.ಸಂ.506 ಸಹವಾಚಕ ಕಲಂ 34 ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ Sec.3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1, 3 ಮತ್ತು 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ.2 ರವರು ಪರಿಶಿಷ್ಟ ಬೋವಿ ಜನಾಂಗಕ್ಕೆ ಸೇರಿರುತ್ತಾರೆ ಎಂದು ಗೊತ್ತಿದ್ದರೂ ಸಹ ಸಾರ್ವಜನಿಕವಾಗಿ ಲೇ ಬೋವಿ ನನ್ನ ಮಗನೇ, ನೀನು ಯಾವ ಜಾತಿಗೆ ಸೇರಿದ ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿರುತ್ತೀರಿ. ಆದ್ದರಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ Sec.3(1)(r)(s) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿತರಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 04 ನೇ ಏಪ್ರಿಲ್ 2026.**

( **ನಾಗಿರೆಡ್ಡಿ.ಎ.**)
3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.